167

# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಜಿಎಂ-81/2017/ಪಿ.ಪಿ.

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ: 22/11/2018

## ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ಕಲಂ 12(3) ರನ್ವಯ ವರದಿ

ವಿಷಯ: (1) ಅಯುಬ ಮನಸೂರಸಾಬ ಬಾದಾಮಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಕೋಲ್ಹಾರ ಗ್ರಾಮ ಪಂಚಾಯತಿ, ಬಸವನಬಾಗೇವಾಡಿ ತಾಲ್ಲೂಕು, ವಿಜಯಪುರ ಜಿಲ್ಲೆ, (2) ಶ್ರೀ ಗುಡದಪ್ಪ ಬಿನ್ ಹಣಮಂತ ಕಟಬರ್, ಕಾರ್ಯದರ್ಶಿ, ಕೋಲ್ಹಾರ ಗ್ರಾಮ ಪಂಚಾಯತಿ, ಬಸವನಬಾಗೇವಾಡಿ ತಾಲ್ಲೂಕು, ವಿಜಯಪುರ ಜಿಲ್ಲೆ, (3) ಶ್ರೀ ಮಲ್ಲಪ್ಪ ಬಿನ್ ಬಸಲಿಂಗಪ್ಪ, ಬ್ಯಾಲ್ಯಾಳ, ಬಿಲ್ ಕಲೆಕ್ಟರ್, ಕೋಲ್ಹಾರ ಗ್ರಾಮ ಪಂಚಾಯತಿ, ಬಸವನಬಾಗೇವಾಡಿ ತಾಲ್ಲೂಕು, ವಿಜಯಪುರ ಜಿಲ್ಲೆ ಮತ್ತು, (4) ಶ್ರೀಮತಿ ನಿಂಗಮ್ಮ ಡಾ/ಆಫ್ ಭೀಮಪ್ಪ ಬಾರಕೇರ, ಸಿಪಾಯಿ, ಕೋಲ್ಹಾರ ಗ್ರಾಮ ಪಂಚಾಯತಿ, ಬಸವನಬಾಗೇವಾಡಿ ತಾಲ್ಲೂಕು, ವಿಜಯಪುರ ಜಿಲ್ಲೆ ರವರುಗಳಾದ ನೀವು ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು ದುರ್ನಡತೆ/ ದುರ್ವರ್ತನೆಯಿಂದ ನಡೆದುಕೊಂಡಿರುವ-ಕುರಿತು.,

*****

ಮಾನ್ಯ ಅಪರ ಪೋಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಪೋಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ವಿಜಯಪುರ (ಇನ್ನು ಮುಂದೆ 'ತನಿಖಾಧಿಕಾರಿ' ಎಂದು ಕರೆಯಲ್ಪಡುತ್ತಾರೆ) ಇವರ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ ವರದಿಯಲ್ಲಿ (1) ಅಯುಬ ಮನಸೂರಸಾಬ ಬಾದಾಮಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಕೋಲ್ಹಾರ ಗ್ರಾಮ ಪಂಚಾಯತಿ, ಬಸವನಬಾಗೇವಾಡಿ ತಾಲ್ಲೂಕು, ವಿಜಯಪುರ ಜಿಲ್ಲೆ, (2) ಶ್ರೀ ಗುಡದಪ್ಪ ಬಿನ್ ಹಣಮಂತ ಕಟಬರ್, ಕಾರ್ಯದರ್ಶಿ, ಕೋಲ್ಹಾರ ಗ್ರಾಮ ಪಂಚಾಯತಿ, ಬಸವನಬಾಗೇವಾಡಿ ತಾಲ್ಲೂಕು, ವಿಜಯಪುರ ಜಿಲ್ಲೆ, (3) ಶ್ರೀ ಮಲ್ಲಪ್ಪ ಬಿನ್ ಬಸಲಿಂಗಪ್ಪ, ಬ್ಯಾಲ್ಯಾಳ, ಬಿಲ್ ಕಲೆಕ್ಟರ್, ಕೋಲ್ಹಾರ ಗ್ರಾಮ ಪಂಚಾಯತಿ, ಬಸವನಬಾಗೇವಾಡಿ ತಾಲ್ಲೂಕು, ವಿಜಯಪುರ ಜಿಲ್ಲೆ ಮತ್ತು, (4) ಶ್ರೀಮತಿ ನಿಂಗಮ್ಮ ಡಾ/ಆಫ್ ಭೀಮಪ್ಪ

ಬಾರಕೇರ, ಸಿಪಾಯಿ, ಕೋಲ್ಹಾರ ಗ್ರಾಮ ಪಂಚಾಯತಿ, ಬಸವನಬಾಗೇವಾಡಿ ತಾಲ್ಲೂಕು, ವಿಜಯಪುರ ಜಿಲ್ಲೆ (ಇನ್ನು ಮುಂದೆ 1 ರಿಂದ 4ನೇ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು ದುರ್ನಡತೆ ಎಸಗಿರುತ್ತಾರೆಂದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರವರು ತನಿಖೆ ಕೈಗೊಂಡಿರುತ್ತಾರೆ.

2. ಆಪಾದನೆಯ ಸಂಕ್ಷಿಪ್ತ ಸಾರಾಂಶ :-

I. 1ನೇ ಮತ್ತು 2ನೇ ಎದುರುದಾರರ ನಿರ್ದೇಶನದ ಮೇರೆಗೆ ಇಂದಿರಾ ಆವಾಜ್ ಯೋಜನೆಯ ಫಲಾನುಭವಿಗಳಿಂದ ಲಂಚದ ಹಣವನ್ನು ಬೇಡಿ ಪಡೆದುಕೊಂಡು 3ನೇ ಎದುರುದಾರರ ಬಳಿ ರೂ.6,705/-ಗಳನ್ನು ಇಟ್ಟುಕೊಂಡಿದ್ದು 3 ಮತ್ತು 4ನೇ ಎದುರುದಾರರು ಫಲಾನುಭವಿಗಳಿಂದ ಲಂಚದ ಹಣವನ್ನು ಬೇಡಿ ಪಡೆದುಕೊಂಡು, ಸಂಗ್ರಹಿಸಿದ ಲಂಚದ ಹಣವನ್ನು ಗ್ರಾಮ ಪಂಚಾಯತಿ ಕಾರ್ಯಾಲಯದ ಅಲ್ಮೇರಾದ ಲಾಕರ್‌ನಲ್ಲಿ ಒಂದು ಪ್ಲಾಸ್ಟಿಕ್ ಚೀಲದಲ್ಲಿ ಹಾಕಿ ಇಟ್ಟಿದ್ದ ರೂ.35,300/- ಗಳು ಹೀಗೆ ಒಟ್ಟು ರೂ.42,005/- ಗಳ ಲಂಚದ ಹಣವನ್ನು ಸಂಗ್ರಹಿಸಿ ಇಟ್ಟುಕೊಂಡಿರುತ್ತಾರೆ.

II. ಅಲ್ಮೇರಾದ ಲಾಕರ್‌ನಲ್ಲಿ ಇಟ್ಟಿದ್ದ ರೂ.35,300/- ಗಳು, ಒಂದು ಚೆಕ್ಕ ಮತ್ತು 14 ಜನರ ಫಲಾನುಭವಿಗಳ ಹೆಸರುಗಳು ಬರೆದು ಅವುಗಳ ಮುಂದೆ ಫಲಾನುಭವಿಗಳಿಂದ ಪಡೆದ ಲಂಚದ ಹಣ ಬಗ್ಗೆ ಹಸ್ತಾಕ್ಷರದಲ್ಲಿ ಬರೆದಿದ್ದ ಒಂದು ಪೇಪರ್ ಮತ್ತು ಚೆಕ್ಕ ವಿತರಿಸಲು ಫಲಾನುಭವಿಗಳಿಂದ ಪಡೆದ ಲಂಚದ ಹಣದ ಬಗ್ಗೆ ಫಲಾನುಭವಿಗಳ ಹೆಸರು ಬರೆದು ಅವರ ಮುಂದೆ ಪಡೆದ ಲಂಚದ ಹಣದ ಬಗ್ಗೆ ಹಸ್ತಾಕ್ಷರದಲ್ಲಿ ಬರೆದ ಆರು ಪೇಜ್ ಪೇಪರಗಳನ್ನು ದಾಳಿ ಕಾಲಕ್ಕೆ ಜಪ್ತ ಮಾಡಿದ್ದು, ಇದರಿಂದ ಎದುರುದಾರರು ಲಂಚದ ಹಣ ಪಡೆದ ನಂತರವೆ ಚೆಕ್ಕುಗಳನ್ನು ವಿತರಿಸಿರುತ್ತಾರೆ.

III. ದಿನಾಂಕ: 13/12/2013 ರಂದು ಶೋಧನಾ ಪಂಚನಾಮೆ ಕಾಲಕ್ಕೆ 3ನೇ ಎದುರುದಾರರಿಂದ ಜಪ್ತ ಮಾಡಿದ ರೂ.6,705/- ಗಳ ಬಗ್ಗೆ ವಿಚಾರಿಸಿದಾಗ ದಿನಾಂಕ: 13/12/2013 ರಂದು ಚೆಕ್ಕ ವಿತರಣೆ ಮಾಡಿದ ಫಲಾನುಭವಿಗಳಿಂದ ಪಡೆದ ಹಣ

ಇರುವುದಾಗಿ ಹೇಳಿರುತ್ತಾರೆ, ಇದರಿಂದ ಚೆಕ್ಕನ್ನು ವಿತರಿಸಲು ಫಲಾನುಭವಿಗಳಿಂದ ಲಂಚದ ಹಣ ಸ್ವೀಕರಿಸಿರುವ ಬಗ್ಗೆ ದೃಢಪಟ್ಟಿರುತ್ತದೆ.

IV. ಶೋದನಾ ಪಂಚನಾಮೆ ಕಾಲಕ್ಕೆ ಜಪ್ತ ಮಾಡಿದ ಒಟ್ಟು ರೂ.42,005/- ಗಳ ಬಗ್ಗೆ 3 ಮತ್ತು 4ನೇ ಎದುರುದಾರರು ಲಿಖಿತ ವಿವರಣೆ ನೀಡಿದ್ದು ಅದರಲ್ಲಿ "ನನಗೆ ಹಾಗೂ ಶ್ರೀಮತಿ ನಿಂಗಮ್ಮ ಬಾರಕೇರ, ಸಿಪಾಯಿ ಇವರಿಗೆ ಚೆಕ್ಕ ವಿತರಣೆ ಮಾಡಲು ನಮ್ಮ ಪಂಚಾಯತಿ ಪಿ.ಡಿ.ಓ., ಕಾರ್ಯದರ್ಶಿಗಳು ಫಲಾನುಭವಿಗಳಿಗೆ ಚೆಕ್ಕ ವಿತರಣೆ ಮಾಡಲು ಹೇಳಿದ್ದು, ನಮ್ಮ ಪಂಚಾಯತಿ ಅಧಿಕಾರಿಗಳು ಹೇಳಿದ್ದರಿಂದ ಈ ಹಣವನ್ನು ನಾವಿಬ್ಬರು ಪಡೆದುಕೊಂಡಿರುತ್ತೇವೆ. ಎರಡು ದಿನಗಳಿಂದ ಚೆಕ್ಕುಗಳನ್ನು ವಿತರಣೆ ಮಾಡುವಾಗ ಫಲಾನುಭವಿಗಳಿಂದ ವಸೂಲಿ ಮಾಡಿದ ಹಣ ಒಟು ರೂ.42,005/- ಗಳು ಇರುತ್ತೇವೆ. ಈ ಹಣವನ್ನು ನಾವು ಎಲ್ಲರೂ ಹಂಚಿಕೊಳ್ಳುತ್ತೇವೆ ಅಂತಾ ಬರೆದು ಕೊಟ್ಟಿರುತ್ತಾರೆ".

V. ಶೋದನಾ ಪಂಚನಾಮೆ ಕಾಲಕ್ಕೆ ಗ್ರಾಮ ಪಂಚಾಯತಿಯಲ್ಲಿ ಹಾಜರಿದ್ದ ಸಾಕ್ಷಿದಾರರು ಇಂದಿರಾ ಆವಾಸ ಯೋಜನೆಯಡಿಯಲ್ಲಿ ಮಂಜೂರಿಯಾದ ಮನೆಗಳ ಫಲಾನುಭವಿಗಳಿಂದ ಲಂಚದ ಹಣ ಪಡೆದು, ಚೆಕ್ಕ ವಿತರಿಸಿದ ಬಗ್ಗೆ ತಮ್ಮ ಹೇಳಿಕೆಯಲ್ಲಿ ಸ್ಪಷ್ಟಪಡಿಸಿದ್ದು ಎದುರುದಾರರು ಫಲಾನುಭವಿಗಳಿಂದ ಲಂಚದ ಹಣ ಪಡೆದ ಬಗ್ಗೆ ದೃಢಪಟ್ಟಿರುತ್ತದೆ.

VI. ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ ಮತ್ತು ಇತರ ಅಂಶಗಳು, ಎದುರುದಾರರ ದುರ್ನಡತೆಯನ್ನು ತೋರಿಸುತ್ತದೆ.

3. ತನಿಖಾ ಅವಧಿಯಲ್ಲಿ ಎದುರುದಾರರುಗಳಿಗೆ ವೀಕ್ಷಣಾ ಟಿಪ್ಪಣಿಯನ್ನು ಕಳುಹಿಸಿ, ಅವರ ದುರ್ನಡತೆಯ ಬಗ್ಗೆ ಇಲಾಖಾ ವಿಚಾರಣೆ ಕೈಗೊಳ್ಳುವ ಸಂಬಂಧ, ಶಿಸ್ತು ಪ್ರಾಧಿಕಾರಕ್ಕೆ ಏಕೆ ಶಿಫಾರಸ್ಸು ವರದಿ ಕಳುಹಿಸಬಾರದು ಎಂಬುದರ ಬಗ್ಗೆ ವಿವರಣೆಯನ್ನು/ಕಾರಣವನ್ನು ಎದುರುದಾರರುಗಳಿಂದ ಕೇಳಲಾಯಿತು. ವೀಕ್ಷಣಾ ಟಿಪ್ಪಣಿಯ ಮೇಲೆ ಉತ್ತರವನ್ನು ಸಲ್ಲಿಸಿದ್ದು, ಆಪಾದನೆಗಳನ್ನು ಈ ಕೆಳಕಂಡಂತೆ ಅಲ್ಲಗಳೆದಿರುತ್ತಾರೆ.

190

ಪ್ರಕರಣದ ಆಪಾದನೆಯು ಸತ್ಯಕ್ಕೆ ದೂರವಾಗಿದೆ. ಪಂಚನಾಮೆ ಕಾಲಕ್ಕೆ ಲಿಖಿತ ವಿವರಣೆ ನೀಡಿದ್ದು ಲೋಕಾಯುಕ್ತ ತನಿಖಾಧಿಕಾರಿಯವರು ಒತ್ತಾಯ ಪೂರ್ವಕವಾಗಿ ಮತ್ತು ತಮ್ಮ ಕೇಸಿಗೆ ಅನುಕೂಲವಾಗುವ ಹಾಗೆ ಬರೆಯಿಸಿಕೊಂಡಿರುತ್ತಾರೆ. ದಿನಾಂಕ: 13/12/2013 ರಂದು ತನಿಖಾಧಿಕಾರಿಗಳು ನಮ್ಮ ಕಾರ್ಯಾಲಯಕ್ಕೆ ಬಂದು ತಪಾಸಣೆ ಮಾಡಿದಾಗ ನಮ್ಮ ಕಾರ್ಯಾಲಯದಲ್ಲಿ ಒಟ್ಟು ರೂ.42,005/- ಗಳು ಅಲ್ಮಾರಿಯಲ್ಲಿ ದೊರೆತಿದ್ದು ನಿಜವಿದ್ದು, ಆದರೆ ಸದರಿ ರೂಪಾಯಿಗಳು ಚೆಕ್ಕ ವಿತರಿಸಲು ಫಲಾನುಭವಿಗಳಿಂದ ಲಂಚದ ಹಣವನ್ನು ಬೇಡಿ ಪಡೆದುಕೊಂಡಿರುತ್ತೇವೆ ಎನ್ನುವುದು ಸುಳ್ಳಿರುತ್ತದೆ. ಸದರಿ ಹಣವು ಕರ ವಸೂಲಿಗೆ ಸಂಬಂಧಿಸಿದ ಹಣವಾಗಿರುತ್ತದೆ. ರಸೀದಿಗಳ ಸಮೇತ ತನಿಖಾಧಿಕಾರಿಗಳಿಗೆ ತೋರಿಸಿದ್ದು ಹಾಗೂ ತನಿಖಾಧಿಕಾರಿಗಳು ಅವುಗಳನ್ನು ಪರಿಶೀಲಿಸಿದ್ದರೂ ಸಹಿತ ಖೊಟ್ಟಿ ಫಿರ್ಯಾದಿಯನ್ನು ದಾಖಲಿಸಿರುತ್ತಾರೆ. ಒಂದು ಚೆಕ್ ವಿತರಿಸಬೇಕಾದರೆ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಗ್ರಾಮ ಪಂಚಾಯತಿ ಪ್ರೆಸಿಡೆಂಟ್ ಇವರು ಚೆಕ್ಕಿನ ಮೇಲೆ ಜಂಟಿಯಾಗಿ ರುಜು ಮಾಡುವುದು ಅತ್ಯವಶ್ಯ ಇರುತ್ತದೆ. 6 ಪೇಜಿನ ಪೇಪರಗಳು ದಾಳಿಯಲ್ಲಿ ಜಪ್ತ ಮಾಡಿರುವುದಿಲ್ಲ. ತನಿಖಾಧಿಕಾರಿಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದು ನಮೂದಿಸಿರುತ್ತಾರೆ.

4. ತನಿಖಾಧಿಕಾರಿಗಳ ವರದಿ ಮತ್ತು ಅದರೊಂದಿಗಿನ ಸಾಕ್ಷ್ಯಗಳ ಹಿನ್ನಲೆಯಲ್ಲಿ ಎದುರುದಾರರುಗಳ ಸಮಜಾಯಿಷಿಯನ್ನು ಈ ಹಂತದಲ್ಲಿ ಒಪ್ಪಲು ಸಾಧ್ಯವಿರುವುದಿಲ್ಲ.

5. ತನಿಖಾ ಅವಧಿಯಲ್ಲಿ ಕಂಡುಬಂದ ಅಂಶಗಳು:

(1) ಕೊಲ್ಲೂರ ಗ್ರಾಮ ಪಂಚಾಯತಿಯಲ್ಲಿ ಅಲ್ಪ ಸಂಖ್ಯಾತರಿಗೆ ಸರ್ಕಾರದಿಂದ ಮಂಜೂರಾದ ಮನೆಗಳ ಫಲಾನುಭವಿಗಳಿಗೆ ಚೆಕ್ ವಿತರಿಸಲು ಗ್ರಾಮ ಪಂಚಾಯತಿ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಲಂಚದ ಹಣ ಪಡೆಯುತ್ತಿರುವುದಾಗಿ ದೂರು ದಾಖಲಿಸಿರುತ್ತಾರೆ.

(2) ಸದರಿ ದೂರಿನ ಆಧಾರದ ಮೇಲೆ ತನಿಖಾಧಿಕಾರಿಗಳು ದಿನಾಂಕ: 13/12/2013 ರಂದು ಗ್ರಾಮ ಪಂಚಾಯತಿಗೆ ಪಂಚರ ಸಮಕ್ಷಮ ದಾಳಿ ಮಾಡಿದ್ದು ತನಿಖಾ ಅವಧಿಯಲ್ಲಿ ಸಂಗ್ರಹಿಸಿದ ಆಧಾರಗಳಿಂದ 1 ಮತ್ತು 2ನೇ ಎದುರುದಾರರ ನಿರ್ದೇಶನದ ಮೇಲೆ 3

ಮತ್ತು 4ನೇ ಎದುರುದಾರರು ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳಿಗೆ ಚೆಕ್ ವಿತರಿಸಲು ಲಂಚದ ಹಣ ಪಡೆದು ಸಂಗ್ರಹಿಸಿ ಪಂಚಾಯತಿಯ ಅಲ್ಮೆರಾದ ಲಾಕರ್‌ನಲ್ಲಿ ವಿವರ ಇರುವ ದಾಖಲೆ, 3ನೇ ಎದುರುದಾರರ ವಶದಲ್ಲಿದ್ದ ಹಣ ಒಟ್ಟು ರೂ.42,005/- ಗಳನ್ನು ಜಪ್ತ ಮಾಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

(3) ತನಿಖಾಧಿಕಾರಿಗಳು ಎದುರುದಾರರ ವಿರುದ್ಧ ಕ್ರೈಂ. ನಂ. 10/2013 ಕಲಂ 7, 8, 13(1)(ಡಿ) ಸಹವಾಚಕ 13(2) ಲಂಚ ನಿರೋಧಕ ಕಾಯ್ದೆ ಅಡಿ ಪ್ರಕರಣ ದಾಖಲಿಸಿ ತನಿಖೆ ಪೂರೈಸಿ ಎದುರುದಾರರ ವಿರದ್ಧ ಅಂತಿಮ ವರದಿ ಸಲ್ಲಿಸಿದ್ದು ತನಿಖಾಧಿಕಾರಿಗಳು ಸಂಗ್ರಹಿಸಿದ ಆಧಾರಗಳಾದ ಮಹಜರ್ ಮತ್ತು ಸಾಕ್ಷಿದಾರರ ಹೇಳಿಕೆಗಳ ಅಂಶಗಳಿಂದ ಎದುರುದಾರರು ಕರ್ತವ್ಯಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

6. ಆದ್ದರಿಂದ, 1 ರಿಂದ 4ನೇ ಎದುರುದಾರರುಗಳು ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು, ಅವರ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೇ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ, ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ, 1966 ರ ನಿಯಮಗಳು 3(1)(i) ಮತ್ತು (iii) ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುವುದು ಕಂಡುಬಂದಿರುತ್ತದೆ.

7. ಆದುರಿಂದ, 1ನೇ ಎದುರುದಾರರಾದ-ಅಯ್ಯುಬ ಮನಸೂರಸಾಬ ಬಾದಾಮಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಕೋಲ್ಹಾರ ಗ್ರಾಮ ಪಂಚಾಯ್ತಿ, ಬಸವನಬಾಗೇವಾಡಿ ತಾಲ್ಲೂಕು, ವಿಜಯಪುರ ಜಿಲ್ಲೆ, (ನಿವೃತ್ತಿ ದಿನಾಂಕ: 31/07/2025), 2ನೇ ಎದುರುದಾರರಾದ-ಶ್ರೀ ಗುಡದಪ್ಪ ಬಿನ್ ಹಣಮಂತ ಕಟಬರ್, ಕಾರ್ಯದರ್ಶಿ, ಕೋಲ್ಹಾರ ಗ್ರಾಮ ಪಂಚಾಯತಿ, ಬಸವನಬಾಗೇವಾಡಿ ತಾಲ್ಲೂಕು, ವಿಜಯಪುರ ಜಿಲ್ಲೆ, (ನಿವೃತ್ತಿ ದಿನಾಂಕ: 31/05/2015), 3ನೇ ಎದುರುದಾರರಾದ-ಶ್ರೀ ಮಲ್ಲಪ್ಪ ಬಿನ್ ಬಸಲಿಂಗಪ್ಪ, ಬ್ಯಾಲ್ಯಾಳ, ಬಿಲ್ ಕಲೆಕ್ಟರ್, ಕೋಲ್ಹಾರ ಗ್ರಾಮ ಪಂಚಾಯತಿ, ಬಸವನಬಾಗೇವಾಡಿ ತಾಲ್ಲೂಕು, ವಿಜಯಪುರ ಜಿಲ್ಲೆ, (ನಿವೃತ್ತಿ ದಿನಾಂಕ: 31/07/2037) ಮತ್ತು, 4ನೇ ಎದುರುದಾರರಾದ-

ಶ್ರೀಮತಿ ನಿಂಗಮ್ಮ ಡಾ/ಆಫ್ ಭೀಮಪ್ಪ ಬಾರಕೇರ, ಸಿಪಾಯಿ, ಕೋಲ್ಹಾರ ಗ್ರಾಮ ಪಂಚಾಯತಿ, ಬಸವನಬಾಗೇವಾಡಿ ತಾಲ್ಲೂಕು, ವಿಜಯಪುರ ಜಿಲ್ಲೆ (ನಿವೃತ್ತಿ ದಿನಾಂಕ: 31/07/2043) ರವರುಗಳ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14–ಎ ರ ಅಡಿಯಲ್ಲಿ ಹಾಗೂ ಕೆ.ಸಿ.ಎಸ್.ಆರ್., 214(2)(ಬಿ)(i) ರಡಿಯಲ್ಲಿ 2ನೇ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಹಾಗೂ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

8. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ, ಕಲಂ 12(4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯಂತೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮವನ್ನು ಈ ವರದಿ ತಲುಪಿದ ದಿನಾಂಕದಿಂದ ಮೂರು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ತಿಳಿಸಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Anand 22/11

[ನ್ಯಾಯಮೂರ್ತಿ ಎನ್. ಆನಂದ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.